# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು

## ವಿರಾಜಪೇಟೆ

***ಸಿ.ಸಿ. ಸಂಖ್ಯೆ : 538/2021***

*ಚಾಸಾ : 3*
*ಪ್ರಾಸಾ : 2*

| | |
|---|---|
| **ಹೆಸರು** | : ಅಬ್ದುಲ್ ರೆಹಮಾನ್ |
| **ತಂದೆಯ ಹೆಸರು** | : ಲೇಟ್ ಎಸ್ ಮಾಯಿನ್ |
| **ವಯಸ್ಸು** | : 55 ವರ್ಷ |
| **ಉದ್ಯೋಗ** | : ಕೃಷಿಕ |
| **ವಾಸಸ್ಥಳ** | : ಬೇಗೂರೂ ಚೇನಿವಾಡ ಗ್ರಾಮ |

**ದಿನಾಂಕ : *25-07-2023* ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ : ಶ್ರೀ. ಎಪಿಪಿ ವಕೀಲರಿಂದ:-**

ಚಾಸಾ-1 ನನ್ನ ಮಗಳು. ಚಾಸಾ-2 ನನ್ನ ಮೊಮ್ಮಗ. ಚಾಸಾ-4 ಹಾಗೂ 5 ರವರ ಪರಿಚಯವಿರುತ್ತದೆ. ಆರೋಪಿ ನನ್ನ ಅಳಿಯ. ದಿನಾಂಕ 16-05-2010 ರಂದು ನನ್ನ ಮಗಳಾದ ಚಾಸಾ-1 ರವರನ್ನು ಆರೋಪಿಗೆ ಕೊಟ್ಟು ಮದುವೆ ಮಾಡಿಸಿರುತ್ತೇನೆ. ಮದುವೆಯಾದ ನಂತರ ಆರೋಪಿಯು ನನ್ನ ಮಗಳಾದ ಚಾಸಾ-1 ರವರ ಜೊತೆ ಯಾವಾಗಲೂ ಜಗಳ ಮಾಡಿಕೊಂಡು, ಗಲಾಟೆ ಮಾಡುತ್ತಿದ್ದನು. ದಿನಾಂಕ 20-12-2020 ರಂದು ಆರೋಪಿಯು ನನ್ನ ಮಗಳ ಜೊತೆ ಗಲಾಟೆ ಮಾಡಿ, ಮನೆಯಲ್ಲಿದ್ದ ಗ್ಯಾಸ್ ಹಾಗೂ ಸ್ಟೌವ್ ನ್ನು ಎಳೆದು ಬಿಸಾಕಿ, ಅವಳಿಗೆ ಹೊಡೆದು, ಮನೆಯಲ್ಲಿ ಇರಬೇಡ ನೀನು ಹಾಗೂ ಮಗು ಇಲ್ಲಿಂದ ಹೋಗಿ ಎಂದು ತಿಳಿಸಿರುತ್ತಾನೆ. ಆಗ ನನ್ನ ಮಗಳು ಮೊಬೈಲ್ ನಿಂದ ವೀಡಿಯೋ ಮಾಡಿದಾಗ ಆರೋಪಿಯು ಬೆಡ್ ರೂಂನಲ್ಲಿದ್ದ ಕತ್ತಿಯನ್ನು ತಂದು, ನನ್ನ ಮಗಳಾದ ಚಾಸಾ-1 ರವರಿಗೆ ಹಲ್ಲೆ ಮಾಡಿದ್ದು, ಸದರಿ ಹಲ್ಲೆಯಿಂದ ನನ್ನ ಮಗಳ ಮೂರು ಕೈಬೆರಳು ಹಾಗೂ ಅಂಗೈಗೆ ರಕ್ತಗಾಯವಾಗಿರುತ್ತದೆ. ಸದರಿ ವಿಚಾರವನ್ನು ನನ್ನ ಮಗಳು ನನಗೆ ಫೋನ್ ಮಾಡಿ ತಿಳಿಸಿರುತ್ತಾಳೆ. ನಂತರ ನಾನು ವಿರಾಜಪೇಟೆ ಸರ್ಕಾರಿ ಆಸ್ಪತ್ರೆಗೆ ಬಂದು ನೋಡಲಾಗಿ, ಅಲ್ಲಿ ನನ್ನ ಮಗಳಿಗೆ ಆರೋಪಿ ಮಾಡಿದ ಹಲ್ಲೆಯಿಂದ ರಕ್ತಗಾಯವಾಗಿರುವುದು ಕಂಡು ಬಂದಿರುತ್ತದೆ. ನಂತರ ಪೋಲಿಸರು ಆಸ್ಪತ್ರೆಗೆ ಬಂದು, ನನ್ನ ಮಗಳಾದ ಚಾಸಾ-1 ರವರ ಹೇಳಿಕೆಯನ್ನು ಹಾಗೂ ನನ್ನ ಹೇಳಿಕೆಯನ್ನು

ಪಡೆದುಕೊಂಡು ಹೋಗಿರುತ್ತಾರೆ. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಆರೋಪಿ ಗೈರು ಹಾಜರಾಗಿದ್ದು, ಆರೋಪಿ ಪರ ವಕೀಲರು ಹಾಜರಾತಿ ವಿನಾಯಿತಿ ಅರ್ಜಿಯನ್ನು ಸಲ್ಲಿಸಿದ್ದು, ಆರೋಪಿಯ ಗುರುತಿಸುವಿಕೆ ಬಗ್ಗೆ ತಕರಾರು ಇರುವುದಿಲ್ಲವೆಂದು ಪರಿಗಣಿಸಲಾಯಿತು.

ಈ ಹಂತದಲ್ಲಿ ಆರೋಪಿ ಪರ ವಕೀಲರು ಪಾಟಿ ಸವಾಲಿಗೆ ಸಮಯಾವಕಾಶ ಕೋರಿದ್ದು, ಸಮಾಯವಕಾಶ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)

ಓ. ಹೇ. ಕೇ. ಸ. ಇದೆ.

ಸಹಿ/-
(ಸಂತೋಷ ಕೊಠಾರಿ)
ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ವಿರಾಜಪೇಟೆ.